# ಬೋಧಕರ ವಿವರ


೧. ಹೆಸರು : ಡಾ.ಗಂಗಾಧರ ದೈವಜ್ಞ

೨. ಜನ್ಮ ದಿನಾಂಕ : ೨೩.೧೦.೧೯೬೪

೩. ವಿದ್ಯಾರ್ಹತೆ : ಎಂ.ಎ., ಎಂ.ಫಿಲ್, ಪಿಎಚ್.ಡಿ

೪. ವಿಳಾಸ : ಮುಕ್ಕಾಂ: ಬಸಾಪೂರ, ಅಂಚೆ: ಕಿತ್ತೂರು – ೫೯೧೧೧೫
ತಾಲೂಕು: ಬೈಲಹೊಂಗಲ, ಬೆಳಗಾವಿ ಜಿಲ್ಲೆ

೫. ಸ್ಥಿರ ದೂರವಾಣಿ ಸಂಖ್ಯೆ : ೦೮೩೯೪ ೨೪೧೪೦೨

೬. ಮೊಬೈಲ್ ಸಂಖ್ಯೆ : ೯೪೮೦ ೫೧೦೮೭೮

೭. ಫ್ಯಾಕ್ಸ್ ಸಂಖ್ಯೆ : ೦೮೩೯೪ ೨೪೧೩೩೪

೮. ಕಾರ್ಯನಿರ್ವಹಿಸುತ್ತಿರುವ ವಿಭಾಗ : ಬುಡಕಟ್ಟು ಅಧ್ಯಯನ

೯. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ : ಸಹ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥ


೧೦. ವಿಷಯ ತಜ್ಞತೆ

೧. ಜಾನಪದ ಸಾಹಿತ್ಯ
೨. ಕನ್ನಡ ಸಾಹಿತ್ಯ
೩. ಸಮುದಾಯಗಳ ಅಧ್ಯಯನ
೪. ಬುಡಕಟ್ಟುಗಳ ಅಧ್ಯಯನ
೫. ಜಾನಪದ ರಂಗಭೂಮಿ
೬. ಮಾತೃ ದೇವತೆಗಳ ಅಧ್ಯಯನ

೧೧. ಅಧ್ಯಯನ ನಡೆಸುತ್ತಿರುವ ಆಸಕ್ತಿಯ ಕ್ಷೇತ್ರಗಳು

೧. ಬುಡಕಟ್ಟುಗಳು
೨. ಬುಡಕಟ್ಟುಗಳ ಜಾನಪದ
೩. ಜನಪದ ಪಕ್ಷಿದೈವಗಳು
೪. ಜಾನಪದ ರಂಗಭೂಮಿ
೫. ಗ್ರಾಮದೇವತೆಗಳ ಸಂಸ್ಕೃತಿ
೬. ಪಾರಂಪರಿಕ ಕೃಷಿ

೧೨. ಯೋಜನೆಗಳ ವಿವರ

೧೨.೧. ಪೂರ್ಣಗೊಳಿಸಿದ ಸಾಂಸ್ಥಿಕ ಯೋಜನೆಗಳು

೧. ಕರ್ನಾಟಕ ಜನಪದ ಕಲೆಗಳ ಕೋಶ ಕರ್ನಾಟಕ ಜನಪದ ಕಲೆಗಳ ತೌರುಮನೆ. ಈ ನಾಡಿನುದ್ದಕ್ಕೂ ಅನೇಕ ಜನಪದ ಕಲೆಗಳು ಇರುವುದು ಕಂಡುಬರುತ್ತದೆ. ಈ ಕಲೆಗಳಲ್ಲಿ ಹಾಡು, ಕಥೆ, ಕುಣಿತ, ಸಂಸ್ಕೃತಿ, ಇತಿಹಾಸ, ವೃತ್ತಿ ಸಂಗೀತ, ಹಾವಭಾವ, ನಟನೆ, ಪಕ್ಕವಾದ್ಯ, ವಿಶಿಷ್ಟ ವೇಷಭೂಷಣ, ಧೈರ್ಯ ಸಾಹಸ, ಭಯ ಭಕ್ತಿ ಮುಕ್ತಿ, ಬದುಕು, ದುಃಖ ದುಮ್ಮಾನ, ಸಂತೋಷ, ರೋಷ ಹಾಗೂ ನವರಸ ಮುಂತಾದ ಎಲ್ಲ ಅಂಶಗಳನ್ನು ಈ ಜನಪದ ಕಲೆಗಳಲ್ಲಿ ಕಾಣುತ್ತೇವೆ. ಸಾವಿರಾರು ವರ್ಷಗಳ ಪರಂಪರೆಯನ್ನು ಹೊಂದಿರುವ ಈ ಜನಪದ ಕಲೆಗಳು ಆಧುನಿಕ ಮನೋರಂಜನೆಯ ಮಾಧ್ಯಮಗಳ ಮುಂದೆ ನಶಿಸಿಹೋಗುತ್ತಿವೆ. ಕೆಲ ಜನಪದ ಕಲೆಗಳು ವೃತ್ತಿ ಕಲೆಗಳಾಗಿರುವುದರಿಂದ ಆಧುನಿಕತೆಯ ಸೋಂಕನ್ನು ಅಂಟಿಸಿಕೊಳ್ಳುತ್ತ ಬದುಕಲು ಪ್ರಯತ್ನಿಸುತ್ತಿವೆ. ನಗರೀಕರಣ, ಜಾಗತೀಕರಣ, ವೈಜ್ಞಾನೀಕರಣದ ಇಂದಿನ ಸಂದರ್ಭದಲ್ಲಿ ಯಾವ ಯಾವ ಭಾಗದಲ್ಲಿ ಯಾವ ಯಾವ ಭಾಗದಲ್ಲಿ ಯಾವ ಯಾವ ಕಲೆಗಳು ಕಂಡುಬರುತ್ತವೆ ಅವುಗಳ ಸ್ವರೂಪ ಲಕ್ಷಣಗಳು ಹೇಗಿವೆ ಈ ಕಲೆಗಳನ್ನು ಪ್ರದರ್ಶಿಸುತ್ತಿದ್ದ ಕಲಾವಿದರ ಸ್ಥಿತಿಗತಿಗಳು ಏನಾಗಿವೆ ಯಾವ ಯಾವ ಸಂದರ್ಭದಲ್ಲಿ ಈ ಜನಪದ ಕಲೆಗಳು ಪ್ರದರ್ಶನಗೊಳ್ಳುತ್ತಿದ್ದವು ಎಂಬುದರ ಸಂಪೂರ್ಣ ಮಾಹಿತಿ ಹಾಗೂ ಛಾಯಾಚಿತ್ರಗಳ ಸಮೇತ ಈ ಯೋಜನೆಯನ್ನು ಸಿದ್ದಪಡಿಸಲಾಗಿದೆ.

೨. ಗ್ರಾಮದೇವತೆಗಳ ಕೋಶ



PDF created with pdfFactory trial version www.pdffactory.com

ಕರ್ನಾಟಕದ ಪ್ರತಿಯೊಂದು ಸ್ಥಳವನ್ನು ಸಮೀಕ್ಷೆ ಮಾಡಿದರೆ ಅಲ್ಲಿ ಮಾತೃದೇವತೆಗಳ ಆರಾಧನೆ ಇದ್ದೇ ಇರುತ್ತದೆ. ಈ ಮಾತೃದೇವತೆಗಳನ್ನು ಜನಪದ ಮಾತೃದೇವತೆಗಳು ಹಾಗೂ ಶಿಷ್ಟ ಮಾತೃದೇವತೆಗಳು ಎಂದು ವಿಭಾಗಿಸಿಕೊಂಡು ಅಧ್ಯಯನ ಕೈಕೊಳ್ಳಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕಂಡು ಬರುವ ದ್ಯಾಮವ್ವ ದುರುಗವ್ವ, ಮಾರೆವ್ವ, ಕಾಳಮ್ಮ, ಸುಂಕಲಮ್ಮ, ಹುಲಿಗೆಮ್ಮ, ಏಳು ಮಕ್ಕಳ ತಾಯಮ್ಮ, ಗಡಿಮಾರೆಮ್ಮ, ಗಾಳೆಮ್ಮ, ಪಟ್ಟದ ಎಲ್ಲಮ್ಮ ಮುಂತಾದ ಅನೇಕ ಹೆಸರುಗಳಿಂದ ಕರೆಯಿಸಿಕೊಳ್ಳುವ ಇವರು ಜನಪದ ಮಾತ್ರದೇವತೆಗಳಾಗಿದ್ದಾರೆ. ಸವದತ್ತಿ ಯಲ್ಲಮ್ಮ, ಕೊಲ್ಹಾಪುರದ ಮಹಾಲಕ್ಷ್ಮಿ, ತುಳಜಾಭವಾನಿ, ಮಧುರೆ ಮೀನಾಕ್ಷಿ ಮುಂತಾದ ದೇವತೆಗಳು ಶಿಷ್ಟ ಮಾತೃದೇವತೆಗಳ ಪರಂಪರೆಯಲ್ಲಿ ಆರಾಧನೆಗೊಳಪಡುತ್ತಿದ್ದಾರೆ. ಹೀಗಾಗಿ ಇವರನ್ನು ಶಿಷ್ಟ ಪರಂಪರೆಯ ಮಾತೃದೇವತೆಗಳ ಸಾಲಿನಲ್ಲಿ ನಿಲ್ಲಿಸಿ ಅಧ್ಯಯನ ಕೈಕೊಳ್ಳಲಾಗಿದೆ. ಈ ಗ್ರಾಮದೇವತೆಗಳ ಇತಿಹಾಸ, ಸಂಸ್ಕೃತಿ, ಆಚರಣೆ, ಪರಂಪರೆ, ಜಾತ್ರೆ, ಹಾಡು, ಕಥೆ, ಐತಿಹ್ಯ, ಪುರಾಣ ಈ ದೇವತೆಗಳ ಆಹಾರ ಪದ್ಧತಿ, ಮೂರ್ತಿಶಿಲ್ಪ, ವೇಷಭೂಷಣ, ಹರಕೆ, ಮುಂತಾದ ವಿಷಯಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

೩. ಅಲೆಮಾರಿ ಕುರುಬರ ಮಾಳಿಂಗರಾಯನ ಕಾವ್ಯ

ಕುರುಬ ಸಮುದಾಯದಲ್ಲಿಯೇ ಅಲೆಮಾರಿಗಳಾದ ಕುರುಬರು ತಮ್ಮ ಸಮುದಾಯದ ಸಾಂಸ್ಕೃತಿಕ ನಾಯಕನಾದ ಮಾಳಿಂಗರಾಯನ ಚರಿತ್ರೆಯನ್ನು ಮೌಖಿಕ ಸಂಪ್ರದಾಯದಲ್ಲಿ ಹೇಗೆ ಉಳಿಸಿಕೊಂಡು ಬಂದಿದ್ದಾರೆ ಎಂಬುದನ್ನು ಈ ಕಾವ್ಯದಲ್ಲಿ ಸಂಗ್ರಹಿಸಲಾಗಿದೆ. ಮಾಳಿಂಗರಾಯ ಪಶುಪಾಲನೆಯ ಹಂತದಲ್ಲಿ ತನ್ನ ಅಸ್ಥಿತ್ವವನ್ನು ಗುರುತಿಸಿಕೊಂಡವನು. ಮಾಳಿಂಗರಾಯನ ಸಮಾಧಿ ಮಹಾರಾಷ್ಟ್ರದ ಸೊಲ್ಲಾಪೂರ ಜಿಲ್ಲೆಯ ಹುಲಜಂತಿಯಲ್ಲಿದೆ.

ಮಾಳಿಂಗರಾಯನ ಕಾವ್ಯ ಪಶುಪಾಲನೆಯನ್ನಾಧರಿಸದ ಅಲೆಮಾರಿ ಜೀವಿಗಳ ಚರಿತ್ರೆ, ಅವರ ಬದುಕು, ಕಷ್ಟ ಸುಖ, ಹೋರಾಟ, ಪಶುಪಾಲನೆ ಉಳಿಸಿಕೊಳ್ಳುವುದಕ್ಕೆ ಅವರು ಮಾಡಿದ ತ್ಯಾಗ, ಪವಾಡ, ಬಲಿದಾನ ಮುಂತಾದ ವಿಷಯಗಳನ್ನು ಈ ಕಾವ್ಯದಲ್ಲಿ ಕಾಣುತ್ತೇವೆ.

೪. ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ

ಕರ್ನಾಟಕದಲ್ಲಿ ನೆಲೆಕಂಡುಕೊಂಡು ಆದಿಮ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿರುವ ಬುಡಕಟ್ಟುಗಳ ಬದುಕು ವಿಶಿಷ್ಟವಾದದ್ದು. ಆಧುನಿಕತೆಗೆ ಹಂತಹಂತವಾಗಿ ಮುಖಾಮುಖಿಯಾಗುತ್ತಿರುವ ಈ ಬುಡಕಟ್ಟುಗಳ ಜೀವನ ಕ್ರಮ ಹಾಗೂ ಅವರ ಪಾರಂಪರಿಕ ಜ್ಞಾನ ಅದು ನಶಿಸುವುದಕ್ಕಿಂತ ಪೂರ್ವದಲ್ಲಿಯೇ ಅದನ್ನು ಸಂಗ್ರಹಿಸಿ ಅಧ್ಯಯನಕ್ಕೊಳಪಡಿಸಬೇಕಾದ್ದು ಅತೀ ಮುಖ್ಯವಾದದ್ದು. ಈ ಹಿನ್ನೆಲೆಯಲ್ಲಿ ಬುಡಕಟ್ಟು ಸಮುದಾಯಗಳಾದ ಹಸಲರು, ಹಾಲಕ್ಕಿ ಒಕ್ಕಲಿಗರು, ಬೇಡರು, ಕಾಡುಗೊಲ್ಲರು, ದೀರು, ಕಾಡು ಕುರುಬರು, ಜೇನು ಕುರುಬರು ಹಾಗೂ ಸೋಲಿಗರನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಸಮುದಾಯಗಳು ಕಂಡುಕೊಂಡಿರುವ ಸೃಷ್ಟಿಯ ಪರಿಕಲ್ಪನೆ, ಹುಟ್ಟಿನಿಂದ ಸಾಯುವವರೆಗೆ ಹಾಗೂ ಸತ್ತನಂತರ ಆಚರಿಸುವ ಅನೇಕ ಕ್ರಿಯೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಈ ಆಚರಣೆಗಳಲ್ಲಿರುವ ಸಾಮ್ಯತೆ ಹಾಗೂ ವ್ಯತ್ಯಾಸಗಳನ್ನು ಗುರುತಿಸಲಾಗಿದೆ. ಆಧುನಿಕತೆಯ ಪ್ರಭಾವದಿಂದ ಬುಡಕಟ್ಟುಗಳ ಆಚರಣೆಗಳಲ್ಲಾದ ಸ್ಥಿತ್ಯಂತರಗಳನ್ನು ಗುರುತಿಸಲಾಗಿದೆ.

೫. ಕರ್ನಾಟಕ ಬುಡಕಟ್ಟುಗಳ ವಿಸ್ತೃತ ಅಧ್ಯಯನ

ವಿದ್ಯಾವಿದ್ಯಾಲಯದ ಧನ ಸಹಾಯ ಆಯೋಗದ ನೆರವಿನಿಂದ ಹಮ್ಮಿಕೊಳ್ಳಲಾಗಿದ್ದ ಈ ಯೋಜನೆಯಲ್ಲಿ ೧. ಬುಡಕಟ್ಟುಗಳ ಪರಂಪರೆ ಮತ್ತು ಆಧುನಿಕತೆಯ ಅಧ್ಯಯನ ೨.ಬುಡಕಟ್ಟುಗಳ ಸಾಮಾಜಿಕ ಆರ್ಥಿಕ ಅಧ್ಯಯನ. ೩.ಬುಡಕಟ್ಟು ಸಮಾಜಗಳ ಸ್ಥಿತ್ಯಂತರದ ಅಧ್ಯಯನ ಎಂದು ವಿಂಗಡಿಸಿಕೊಂಡು ಕರ್ನಾಟಕದ ಬುಡಕಟ್ಟುಗಳ ಅಧ್ಯಯನ ಕೈಕೊಳ್ಳಲಾಗಿದೆ. ಈ ಯೋಜನೆಯಲ್ಲಿ ನಾನು ಅಡಿಯನ್, ಪಣಿಯನ್, ಯರವ, ಕಮ್ಮಾರ ಸಮುದಾಯಗಳ ಅಧ್ಯಯನ ಮಾಡಲಾಗಿದೆ. ೧. ಬುಡಕಟ್ಟುಗಳ ಪರಂಪರೆ ಮತ್ತು ಆಧುನಿಕತೆಯ ಅಧ್ಯಯನದ ಈ ಭಾಗದಲ್ಲಿ ಬುಡಕಟ್ಟಿನ ಹೆಸರು ಮತ್ತು ಅದರ ಅನನ್ಯತೆ, ಭೌಗೋಳಿಕ ಹಿನ್ನೆಲೆ, ಜನಸಂಖ್ಯೆ, ಭಾಷೆ, ದೈವ ಮತ್ತು ಧರ್ಮ, ಹಬ್ಬಗಳು, ಆಚರಣೆಗಳು, ನಂಬಿಕೆ ಸಂಪ್ರದಾಯಗಳು ಹಾಗೂ ಸಾಹಿತ್ಯದ ಉಪವಿಭಾಗದಲ್ಲಿ ಸೃಷ್ಟಿ ಪುರಾಣಗಳು, ಐತಿಹ್ಯಗಳು, ಕಥೆಗಳು, ಕಾವ್ಯ, ಗಾದೆ, ಒಗಟು, ಒಡಪು, ಕಲೆ, ಆಟಗಳು, ವೇಷಭೂಷಣಗಳು, ಆಹಾರ ಪದ್ಧತಿ, ಪಾರಂಪರಿಕ ವೈದ್ಯ ಪದ್ಧತಿಗಳ ಅಧ್ಯಯನ ಮಾಡಲಾಗಿದೆ. ೨. ಬುಡಕಟ್ಟುಗಳ ಸಾಮಾಜಿಕ ಆರ್ಥಿಕ ಅಧ್ಯಯನದ ಈ ಭಾಗದಲ್ಲಿ ಬುಡಕಟ್ಟುಗಳ ಶಾರೀರಕ ಲಕ್ಷಣಗಳು, ಕುಟುಂಬ, ವಿವಾಹ, ಕಳ್ಳುಬಳ್ಳಿ, ಬಂಧುತ್ವ, ಬುಡಕಟ್ಟು ಜಾತಿ, ನ್ಯಾಯ ಪದ್ಧತಿ, ಒಳಾಡಳಿತ ವ್ಯವಸ್ಥೆ, ಸಾಮಾಜಿಕ ಸಮಸ್ಯೆಗಳು, ಆರ್ಥಿಕ ಸಂಘಟನೆಯಲ್ಲಿ ಆಹಾರ ಸಂಗ್ರಹಣೆ, ಬೇಟೆ, ಪಶುಪಾಲನೆ, ಕೃಷಿ, ಕೈಗಾರಿಕೆ, ವಾಣಿಜ್ಯ, ಸಹಕಾರ ಸಂಘಗಳು, ಆರ್ಥಿಕ ಸಮಸ್ಯೆಗಳು ಮತ್ತು ಅಭಿವೃದ್ಧಿ ಕುರಿತು ಅಧ್ಯಯನ ಮಾಡಲಾಗಿದೆ. ೩. ಬುಡಕಟ್ಟು ಸಮಾಜಗಳ ಸ್ಥಿತ್ಯಂತರದ ಅಧ್ಯಯನದ ಈ ಭಾಗದಲ್ಲಿ ಶಿಕ್ಷಣ, ಮೀಸಲಾತಿ, ಆರೋಗ್ಯ, ಅಭಿವೃದ್ಧಿಯ ರೂಪ ವಿರೂಪಗಳು, ಚಳುವಳಿಗಳು, ಮತ್ತು ಆಧುನಿಕತೆಯ ಪ್ರಭಾವ ಇವುಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.



PDF created with pdfFactory trial version www.pdffactory.com

### ೧೨.೨. ಪೂರ್ಣಗೊಳಿಸಿದ ವೈಯಕ್ತಿಕ ಯೋಜನೆಗಳು

೧. ಕಚ್ಚೆ ಗೌಳಿಗರ ಅಧ್ಯಯನ ಮಹಾರಾಷ್ಟ್ರದ ಗುಡ್ಡಗಾಡು ಪ್ರದೇಶಗಳಲ್ಲಿ ಪಶುಪಾಲನೆಯನ್ನೇ ತಮ್ಮ ಮೂಲ ವೃತ್ತಿಯಾಗಸಿಕೊಂಡಿದ್ದ ಕಚ್ಚೆ ಗೌಳಿಗರು ಬರಗಾಲ ಹಾಗೂ ರಾಜಕೀಯ ಕಾರಣಗಳಿಂದ ತಮ್ಮ ಪಶುಸಂಪತ್ತಿನ ಮೂಲಕ ಸುಮಾರು ೧೮೨೪ರ ವೇಳೆಗೆ ಕರ್ನಾಟಕದ ಖಾನಾಪೂರ ಜಿಲ್ಲೆಯನ್ನು ಪ್ರವೇಶಿಸುತ್ತಾರೆ. ಹಂತ ಹಂತವಾಗಿ ಧಾರವಾಡ ಹಾಗೂ ಉತ್ತರ ಕನ್ನಡ ಜಿಲ್ಲೆಯ ಕಾಡುಪ್ರದೇಶಗಳಲ್ಲಿ ಪಶುಪಾಲನೆ ಮಾಡುತ್ತ ಜೀವನ ಸಾಗಿಸುತ್ತಿದ್ದಾರೆ. ಆರ್ಥಿಕವಾಗಿ, ಶೈಕ್ಷಣಿಕವಾಗಿ, ಅತ್ಯಂತ ಹಿಂದುಳಿದ ಇವರ ಸಂಸ್ಕೃತಿ ಅತ್ಯಂತ ವಿಶಿಷ್ಟವಾದದ್ದು. ಬುಡಕಟ್ಟುಗಳ ಎಲ್ಲ ಲಕ್ಷಣಗಳನ್ನೂ ಹೊಂದಿದ್ದರೂ ಸರ್ಕಾರ ಇವರನ್ನು ಪರಿಶಿಷ್ಟ ಪಂಗಡದಲ್ಲಿ ಸೇರಿಸಿಲ್ಲ. ಇಂದು ಪಶುಪಾಲನೆಯನ್ನೇ ನಂಬಿ ಬದುಕು ಸಾಗಿಸುತ್ತಿರುವುದು ಇವರಿಗೆರಬಹಳ ತೊಂದರೆಯಾಗಿ ಪಶುಪಾಲನೆಯನ್ನು ಕೈಬಿಡುತ್ತಾ ಕೃಷಿ, ಕೃಷಿಕೂಲಿ ಮಾಡುತ್ತ ಬದುಕುತ್ತಿದ್ದಾರೆ. ಆಧುನಿಕ ಪರಿಸರದಲ್ಲಿ ಇವರು ತಮ್ಮ ಅಸ್ಥಿತ್ವ ಗುರುತಿಸಿಕೊಳ್ಳಲು ಹೋರಾಡುತ್ತಿದ್ದಾರೆ. ಗೌಳಿಗರ ಇಂದಿನ ಬದುಕಿನ ಸ್ಥಿತಿಗತಿಗಳು ಹೇಗಿವೆ ಮತ್ತು ಅವರ ಬದುಕಿನ ಹೋರಾಟಗಳು ಹೇಗಿವೆ ಎಂಬುದನ್ನು ಕುರಿತು ಅಧ್ಯಯನ ಮಾಡಲಾಗಿದೆ.

### ೧೩. ಪ್ರಗತಿಯಲ್ಲಿರುವ ಯೋಜನೆಗಳು

೧. ಕರ್ನಾಟಕದ ಅರಣ್ಯವಾಸಿ ಬುಡಕಟ್ಟುಗಳ ಜಾನಪದ ವಿಶ್ವವಿದ್ಯಾಲಯದ ಧನ ಸಹಾಯ ಆಯೋಗದ ನೆರವಿನಿಂದ ಕೈಕೊಳ್ಳಲಾದ ಯುಜಿಸಿ ಎಸ್‌ಎಪಿ ಡಿಆರ್ ಎಸ್೨ನೇ ಹಂತದ ಯೋಜನೆಯಾದ ........ ಎಂಬ ಯೋಜನೆಯಲ್ಲಿ .... ಎಂಬ ಉಪಶೀರ್ಷಿಕೆಯನ್ನು ಆಯ್ಕೆ ಮಾಡಿಕೊಂಡು ಅಧ್ಯಯನವನ್ನು ಆರಂಭಿಸಿದ್ದೇನೆ..... ಈ ಅಧ್ಯಯನಕ್ಕೆ ಕರ್ನಾಟಕದಲ್ಲಿ ವಾಸಿಸುತ್ತಿರುವ ಬುಡಕಟ್ಟುಗಳಾದ ಸಿದ್ದಿ, ಗೊಂಡ, ಹಾಲಕ್ಕಿ ಒಕ್ಕಲಿಗ, ಹಸಲರು, ಮಲೆ ಕುಡಿಯ, ಮರಾಠಿ ನಾಯಕ, ಯರವ, ಜೇನು ಕುರುಬ, ಕಾಡು ಕುರುಬ, ಸೋಲಿಗ. ಇರುಳ, ಮ್ಯಾಸ ಬೇಡ, ಕಾಡುಗೊಲ್ಲ, ಚಂಚು, ಕಮ್ಮಾರ ಮತ್ತು ಅಡಿಯನ್ ಸಮುದಾಯಗಳು ನನ್ನ ವ್ಯಾಪ್ತಿಯಲ್ಲಿ ಬರುತ್ತವೆ. ಈ ಬುಡಕಟ್ಟು ಸಮುದಾಯಗಳು ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ, ಮಡಿಕೇರಿ, ಮೈಸೂರು, ರಾಮನಗರ, ಚಿತ್ರದುರ್ಗ ಮತ್ತು ಕರ್ನಾಟಕ ತಮಿಳುನಾಡು ಹಾಗೂ ಆಂಧ್ರಪ್ರದೇಶದ ಗಡಿ ಭಾಗದಲ್ಲಿ ವಾಸಿಸುತ್ತಿರುವುದು ಕಂಡು ಬರುತ್ತದೆ.

.....ಈ ಅಧ್ಯಾಯದಲ್ಲಿ ಏಳು ವಿಭಾಗಗಳಾಗಿ ವಿಂಗಡಿಸಿಕೊಂಡು ಅಧ್ಯಯನ ಕೈಕೊಳ್ಳಲಾಗಿದೆ.

೧. ಕುಲ ಮೂಲ ಆಚರಣೆಗಳು, ನಂಬಿಕೆಗಳು, ಸಂಪ್ರದಾಯಗಳು
೨. ದೈವ ಮತ್ತು ಧರ್ಮದ ಆಚರಣೆಗಳು, ನಂಬಿಕೆಗಳು, ಸಂಪ್ರದಾಯಗಳು
೩. ವಾರ್ಷಿಕಾವರ್ತನ ಹಬ್ಬಗಳಲ್ಲಿಯ ಆಚರಣೆಗಳು, ನಂಬಿಕೆಗಳು, ಸಂಪ್ರದಾಯಗಳು
೪. ಜೀವನಾವರ್ತಕ ಆಚರಣೆಗಳು, ನಂಬಿಕೆಗಳು, ಸಂಪ್ರದಾಯಗಳು
೫. ಸಾಮುದಾಯಿಕ ಆಚರಣೆಗಳು, ನಂಬಿಕೆಗಳು, ಸಂಪ್ರದಾಯಗಳು
೬. ಮಾಟ, ಮಂತ್ರ, ಮೋಡಿ ಸಂದರ್ಭದ ಆಚರಣೆಗಳು, ನಂಬಿಕೆ, ಸಂಪ್ರದಾಯಗಳು
೭. ಗುಪ್ತ ಆಚರಣೆಗಳು, ಸಂಪ್ರದಾಯಗಳು, ನಂಬಿಕೆಗಳು

೨. ಸೋಲಿಗರ ಪಾರಂಪರಿಕ ಕೃಷಿ ಬಿಳಿಗಿರಿ ರಂಗನ ಬೆಟ್ಟವನ್ನು ಅನುಲಕ್ಷಿಸಿ ಸೋಲಿಗರು ಬೇಟೆ ಹಾಗೂ ಕೃಷಿಯನ್ನು ಅವಲಂಬಿಸಿ ಬದುಕು ಸಾಗಿಸುತ್ತಿದ್ದವರು. ಇಂದು ಬೇಟೆಯನ್ನು ನಿಷೇದಿಸಿದ್ದರಿಂದ ಸೋಲಿಗರು ಬೇಟೆಯನ್ನು ಆಡುತ್ತಿಲ್ಲ. ಕೇವಲ ಕೃಷಿ ಮತ್ತು ಕಾಡಿನ ಉತ್ಪನ್ನಗಳ ಸಂಗ್ರಹಣೆ ಮಾಡಿ ಅವುಗಳನ್ನು ಮಾರಿ ಬದುಕು ಸಾಗಿಸುತ್ತಿದ್ದಾರೆ. ಇವರು ಪರಂಪರಾನುಗತವಾದ ಕೃಷಿಯಲ್ಲಿ ರಾಗಿ, ಬೇಳೆಕಾಳುಗಳು, ಬತ್ತ ಮುಂತಾದವುಗಳನ್ನು ಬೆಳೆಯುತ್ತಾರೆ. ಒಂದು ಕಾಲಕ್ಕೆ ಕುಮರಿ ಬೇಸಾಯದ ಮೂಲಕ ಹೆಚ್ಚು ಪೋಷಕಾಂಶಗಳಿರುವ ಆಹಾರ ಧಾನ್ಯಗಳನ್ನು ಬೆಳೆಯುತ್ತಿದ್ದರು. ಇಂದು ಇವರು ಆಧುನಿಕ ಕೃಷಿ ಪದ್ಧತಿಯನ್ನು ಹಂತಹಂತವಾಗಿ ಬಳಸಿಕೊಳ್ಳುತ್ತಿದ್ದಾರೆ. ಸೋಲಿಗರ ಪಾರಂಪರಿಕ ಕೃಷಿ ಮತ್ತು ಆಧುನಿಕ ಕೃಷಿ ಪದ್ಧತಿಗಳು, ಕೃಷಿಗೆ ಸಂಬಂಧಿಸಿದ ಆಚರಣೆಗಳು ಹೇಗಿವೆ ಎಂಬುದನ್ನು ಕುರಿತು ಇಲ್ಲಿ ಅಧ್ಯಯನ ಮಾಡಲಾಗುತ್ತಿದೆ.

### ೧೪. ಪ್ರಕಟಣೆಗಳು

#### ೧೪.೧. ವಿಶ್ವವಿದ್ಯಾಲಯದಿಂದ ಪ್ರಕಟಿತ ಕೃತಿಗಳು

೧. ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ ಬುಡಕಟ್ಟು ಸಮುದಾಯಗಳಾದ ಹಸಲರು, ಹಾಲಕ್ಕಿ ಒಕ್ಕಲಿಗರು, ಗೊಂರು, ಬೇಡರು, ಕಾಡುಗೊಲ್ಲರು, ದೀವರು, ಗೌಳಿಗರು, ಕಾಡು ಕುರುಬರು, ಜೇನು ಕುರುಬರು ಹಾಗೂ ಸೋಲಿಗರನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಸಮುದಾಯಗಳಲ್ಲಿ ಹುಟ್ಟಿನಿಂದ ಸಾಯುವವರೆಗೆ ಹಾಗೂ ಸತ್ತನಂತರ ಪರಂಪರಾನುಗತವಾಗಿ ಆಚರಿಸಿಕೊಂಡು ಬರುತ್ತಿದ್ದ ಆಚರಣೆಗಳು ಹೇಗಿದ್ದವು ಆಧುನಿಕತೆಯ ಪ್ರಭಾವದಿಂದ ಈ ಆಚರಣೆಗಳ ಮೇಲಾದ ಪರಿಣಾಮಗಳೇನು ಎಂಬುದನ್ನು ಕುರಿತು ವಿಶ್ಲೇಷಣೆ ಮಾಡಲಾಗಿದೆ. ೧ನೇ ಅಧ್ಯಾಯದಲ್ಲಿ ಬುಡಕಟ್ಟುಗಳಲ್ಲಿ ಪ್ರಚಲಿತವಿರು ಸೃಷ್ಟಿ ಪುರಾಣಗಳನ್ನು ಕುರಿತು ವಿಶ್ಲೇಷಣೆ ಮಾಡಲಾ. ೨ನೇ ಅಧ್ಯಾಯದಲ್ಲಿ ಬುಡಕಟ್ಟು ಹುಟ್ಟಿನ ಸಂದರ್ಭದ ಆಚರಣೆಗಳ ವಿಶ್ಲೇಷಣೆ, ೩ನೇ ಅಧ್ಯಾಯದಲ್ಲಿ ಋತುಮತಿ



PDF created with pdfFactory trial version www.pdffactory.com

ಸಂದರ್ಭದ ಆಚರಣೆಗಳ ವಿಶ್ಲೇಷಣೆ, ೪ನೇ ಅಧ್ಯಾಯದಲ್ಲಿ ಮದುವೆ ಸಂದರ್ಭದ ಆಚರಣೆಗಳ ವಿಶ್ಲೇಷಣೆ, ೫ನೇ ಅಧ್ಯಾಯದಲ್ಲಿ ಸಾವಿನ ಸಂದರ್ಭದ ಆಚರಣೆಗಳ ವಿಶ್ಲೇಷಣೆ, ೬ನೇ ಅಧ್ಯಾಯದಲ್ಲಿ ಸಾವಿನ ನಂತರ ದೆವ್ವ ಭೂತಗಳ ಪರಿಕಲ್ಪನೆ ಕುರಿತು ವಿಶ್ಲೇಷಣೆ ಮಾಡಲಾಗದೆ. ಈ ಎಲ್ಲ ಆಚರಣೆಗಳಲ್ಲಿರುವ ಸಾಮ್ಯತೆ ಹಾಗೂ ವೈಷಮ್ಯತೆಗಳನ್ನು ಗುರುತಿಸಲಾಗಿದೆ.

೨. ಸಣ್ಣಾಟಗಳು ಹುಟ್ಟು ಬೆಳವಣಿಗೆ ಜನಪದ ರಂಗಭೂಮಿಯಲ್ಲಿ ಅದರಲ್ಲೂ ಉತ್ತರ ಕರ್ನಾಟಕದ ಜನಪದ ರಂಗಭೂಮಿಯಲ್ಲಿ ಸಣ್ಣಾಟವೆಂಬ ವಿಶಿಷ್ಟ ಪ್ರಕಾರವಿದೆ. ಈ ಸಣ್ಣಾಟದ ರಂಗಭೂಮಿ ಹುಟ್ಟಿಕೊಳ್ಳಲಿಕ್ಕೆ ಕಾರಣಗಳೇನು ಯಾವ ಯಾವ ಜನಪದ ಕಲಾಪ್ರಕಾರಗಳು ಈ ಸಣ್ಣಾಟದ ರಂಗಭೂಮಿ ಉದಯಿಸಲಿಕ್ಕೆ ಪ್ರೇರಣೆಗಳನ್ನು ನೀಡಿವೆ ಪ್ರಾರಂಭದ ಘಟ್ಟದ ಸಣ್ಣಾಟಗಳ ಸ್ವರೂಪ ಲಕ್ಷಣಗಳು ಹೇಗಿದ್ದವು. ಹಂತ ಹಂತವಾಗಿ ಈ ಸಣ್ಣಾಟಗಳ ಬೆಳವಣಿಗೆ ಹೇಗಾಯಿತು ಎಂಬ ವಿಚಾರಗಳನ್ನು ಕುರಿತು ಈ ಪುಸ್ತಕದಲ್ಲಿ ವಿವರಿಸಲಾಗಿದೆ.

**೧೪.೨.ವೈಯಕ್ತಿಕ ಪ್ರಕಟಿತ ಕೃತಿಗಳು**

೧. ಶಿರಸಂಗಿ ಕಾಳಮ್ಮ ಸಾಂಸ್ಕೃತಿಕ ಅಧ್ಯಯನ ಆರಾಧನಾ ಪರಂಪರೆ ವಿಶ್ವಕರ್ಮರ ಕುಲದೈವವಾಗಿರುವ ಕಾಳಮ್ಮ ಶಿರಸಂಗಿಯಲ್ಲಿ ನೆಲೆಗೊಳ್ಳಲಿಕ್ಕೆ ಕಾರಣಗಳೇನು ವಿಶ್ವಕರ್ಮರಿಗೂ ಈ ಕಾಳಮ್ಮನಿಗೂ ಇರುವ ಸಂಬಂಧ ಎಂಥಹದ್ದು ಶಿರಸಂಗಿಯಲ್ಲಿ ವರ್ಷದುದ್ದಕ್ಕೂ ನಡೆಯುವ ಆಚರಣೆಗಳು ಯಾವವು ಯುಗಾದಿಯಲ್ಲಿ ವಿಶಿಷ್ಟವಾಗಿ ಆಚರಿಸುವ ಆಚರಣೆಗಳು ಯಾವವು ಭಾರತೀಯ ಸಂಸ್ಕೃತಿಗೆ ವಿಶ್ವಕರ್ಮರು ನೀಡಿದ ಕೊಡುಗೆಗಳು ಯಾವುವು ಎಂಬ ವಿಷಯಗಳನ್ನು ಎರಡು ಅಧ್ಯಾಯಗಳಲ್ಲಿ ವಿಶ್ಲೇಷಣೆ ಮಾಡಲಾಗಿದೆ.

**೧೪.೩. ಸಂಪಾದಿತ ಕೃತಿಗಳು**

ಅಡಿವೆಪ್ಪ ಒಡೆಯರ ಹಾಡಿದ ಮಾಳಿಂಗರಾಯನ ಕಾವ್ಯ ಮಾಳಿಂಗರಾಯನ ಕಾವ್ಯ ಪಶುಪಾಲನೆಯನ್ನಾಧರಿಸದ ಅಲೆಮಾರಿ ಜೀವಿಗಳ ಚರಿತ್ರೆ, ಅವರ ಬದುಕು, ಕಷ್ಟ ಸುಖ, ಹೋರಾಟ, ಪಶುಪಾಲನೆ ಉಳಿಸಿಕೊಳ್ಳುವುದಕ್ಕೆ ಅವರು ಮಾಡಿದ ತ್ಯಾಗ, ಪವಾಡ, ಬಲಿದಾನ ಮುಂತಾದ ವಿಷಯಗಳು ಈ ಕಾವ್ಯದಲ್ಲಿ ಕಾಣುತ್ತೇವೆ. ಸುದೀರ್ಘವಾದ ಪ್ರಸ್ತಾವನೆಯೊಂದಿಗೆ ಈ ಕಾವ್ಯವನ್ನು ಪ್ರಕಟಿಸಲಾಗಿದೆ.

**೧೫. ಪ್ರಕಟಿತ ಪ್ರಮುಖ ೧೦ ಲೇಖನಗಳು (ಪ್ರತಿ ಲೇಖನಕ್ಕೂ ೫೦ ಪದಗಳಲ್ಲಿ ಸಾರಾಂಶ)**

೧. ಸಣ್ಣಾಟದ ಕವಿಪ್ರತಿ ರಂಗಪ್ರತಿ ಸಣ್ಣಾಟದ ಸ್ವರೂಪ ಲಕ್ಷಣಗಳು, ೧೯೯೯, ಪ್ರ.ಜಾನಪದ ಸಂಶೋಧನಾ ಕೇಂದ್ರ, ಕಿತ್ತೂರು

ಸಣ್ಣಾಟದ ಕವಿಯೊಬ್ಬ ರಚಿಸಿದ ಕೃತಿಯೊಂದು ರಂಗದ ಮೇಲೆ ಪ್ರದರ್ಶನಗೊಳ್ಳುತ್ತಿದ್ದಾಗ ಅದು ಪ್ರತಿಸಲವೂ ಹೊಸ ಪಠ್ಯಾಗಿ ಹೊರಹೊಮ್ಮುತ್ತಿರುತ್ತದೆ. ಪಠ್ಯವೊಂದು ಪ್ರದರ್ಶನಗೊಳ್ಳುತ್ತಿದ್ದಾಗ ನಟರು ರಂಗದ ಮೇಲೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುವ ಸಂದರ್ಭದಲ್ಲಿ ಕವಿ ಪ್ರತಿಯಲ್ಲಿರುವ ಸಂಭಾಷಣೆಗಳನ್ನು ಬಿಟ್ಟು ಪ್ರೇಕ್ಷಕರ ಮನಸ್ಸನ್ನು ಮುದಗೊಳಿಸುವ ಹೊಸ ಪಠ್ಯವನ್ನು ರಂಗದ ಮೇಲೆಯೇ ಸೃಷ್ಟಿ ಮಾಡುತ್ತಾರೆ. ಹೀಗಾಗಿ ಕವಿಯು ರಚಿಸಿದ ಪಠ್ಯವು ಪ್ರತಿಸಲ ಪ್ರದರ್ಶನಗೊಂಡಾಗ ಅದು ಹೇಗೆ ಹೊಸ ರೂಪವನ್ನು ಪಡೆದುಕೊಂಡು ರಂಗಪ್ರತಿಯಾಗಿ ಹೊರಹೊಮ್ಮುತ್ತದೆ ಎಂಬುದನ್ನು ಪ್ರದರ್ಶನ ಸಿದ್ದಾಂತದ ಹಿನ್ನೆಲೆಯಲ್ಲಿ ವಿವರಿಸಲಾಗಿದೆ.

೨. ಬುಡಗ ಜಂಗಾಲರು ಕರ್ನಾಟಕ ಬುಡಕಟ್ಟುಗಳ ಕೋಶ ಭಾಗ ೨, ೨೦೦೦ ಪ್ರ.ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ಬುಡಗ ಜಂಗಾಲರು, ಬುಡ್ಗ ಜಂಗಮರು, ವೇಷಗಾರರು, ಜಾತಿಗಾರರು, ಸೋಗು ಹಾಕುವವರು, ಹಗರಣದವರು, ಪಗರಣೆಗರು ಬಹುರೂಪಿಗಳು ಮುಂತಾದ ಹೆಸರುಗಳಿಂದ ಕರೆಯಿಸಿಕೊಳ್ಳುತ್ತಿರುವ ಈ ಸಮುದಾಯದ ಪ್ರಾಚೀನತೆ, ಅವರ ಸ್ವರೂಪ ಲಕ್ಷಣಗಳು, ಜೀವನ ಕ್ರಮ, ಪ್ರದರ್ಶಿಸುವ ಕಲೆಗಳು, ನಿರ್ವಹಿಸುವ ಇತರೆ ವೃತ್ತಿಗಳು, ಇವರ ಸಾಹಿತ್ಯ, ಹುಟ್ಟಿನಿಂದ ಸಾಯುವವರೆಗಿನ ಆಚರಣೆಗಳನ್ನು ಕುರಿತು ವಿವರಿಸಲಾಗಿದೆ.

೩. ಬುಡಕಟ್ಟುಗಳಲ್ಲಿರುವ ಸೃಷ್ಟಿ ಪುರಾಣಗಳು ಡಾ.ಪಿ.ಕೆ.ಖಂಡೋಬಾ ಅಭಿನಂದನ ಗ್ರಂಥ, ೨೦೦೩, ಪ್ರ.ಡಾ.ಪಿ.ಕೆ ಖಂಡೋಬಾ ಅಭಿನಂದನಾ ಸಮಿತಿ, ಗುಲಬರ್ಗಾ

ಸಾಮಾನ್ಯವಾಗಿ ಪ್ರತಿಯೊಂದು ಬುಡಕಟ್ಟಿನಲ್ಲಿಯೂ ಭೂಮಿ, ಆಕಾಶ, ನೀರು, ಮಾನವ, ಮಾನವನ ವೃತ್ತಿಗಳು, ಭೂಮಿಯ ಮೇಲಿನ ಜೀವರಾಶಿಗಳು ಹೇಗೆ ಸೃಷ್ಟಿಯಾದವು ಎಂಬುದನ್ನು ಕುರಿತು ವಿವರಿಸುವ ಅವರದೇ ಆದ ಸೃಷ್ಟಿಪುರಾಣಗಳಿವೆ. ಈ ಸೃಷ್ಟಿ ಪುರಾಣಗಳು ಭಿನ್ನ ಭಿನ್ನ ರೀತಿಯಲ್ಲಿ ಕಂಡುಬರುತ್ತವೆ. ನಾನು ಹಸಲರು, ಹಾಲಕ್ಕಿ ಒಕ್ಕಲಿಗರು, ಗೊಂಡರು, ಬೇಡರು, ಕಾಡುಗೊಲ್ಲರು, ದೀವರು, ಗೌಳಿಗರು, ಕಾಡು ಕುರುಬರು, ಜೇನು ಕುರುಬರು ಹಾಗೂ ಸೋಲಿಗರ ಸಮುದಾಯದಲ್ಲಿ ಪ್ರಚಲಿಅತವಿರುವ ಸೃಷ್ಟಿ ಪುರಾಣಗಳನ್ನು ಸಂಗ್ರಹಿಸಿ ಅವುಗಳನ್ನು ಭಿನ್ನ ಭಿನ್ನ ನೆಲೆಯಲ್ಲಿ ವಿಶ್ಲೇಷಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

೪. ಮಾಟ, ಮಂತ್ರ, ಮೋಡಿ ಆಚರಣಾ ಸಂದರ್ಭದ ಸಾಹಿತ್ಯ ಮಾಟ ಮಂತ್ರ, ಮೋಡಿ, ೨೦೦೩, ಪ್ರ.ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ



PDF created with pdfFactory trial version www.pdffactory.com

ಅನಾದಿಕಾಲದಿಂದಲೂ ಮಾಟ, ಮಂತ್ರ, ಮೋಡಿ ಈ ಪ್ರಕ್ರಿಯೆಗಳು ಜನಪದರ ಬದುಕಿನಲ್ಲಿ ಜೀವಂತವಾಗಿ ಉಳಿದುಕೊಡು ಬಂದಿವೆ. ಇಂದಿನ ಕಂಪ್ಯೂಟರ್ ಯುಗದಲ್ಲಿಯೂ ಕೂಡ ಅವು ಪ್ರಾಶಸ್ತ್ಯವನ್ನು ಪಡೆಯುತ್ತಿವೆ. ಇದಕ್ಕೆ ಕಾರಣಗಳೇನು ಎನ್ನುವುದು ತುಂಬ ಕುತೂಹಲಕರವಾದ ವಿಷಯ. ಈ ಸಂದರ್ಭದಲ್ಲಿ ಅವರು ಬಳಸುವ ಸಾಹಿತ್ಯ ಕೂಡ ಅಷ್ಟೇ ಗಂಭೀರ ಅಧ್ಯಯನವನ್ನು ಆಶಿಸುತ್ತದೆ. ಪ್ರಸ್ತುತ ಲೇಖನದಲ್ಲಿ ಮಾಟ, ಮಂತ್ರ, ಮೋಡಿಗೆ ಸಂಬಂಧಪಟ್ಟ ಸಂದರ್ಭದ ಸಾಹಿತ್ಯವನ್ನು ಅಧ್ಯಯನದ ಅನುಕೂಲಕ್ಕಾಗಿ ಮಂತ್ರ ಸಾಹಿತ್ಯ, ತಂತ್ರ ಸಾಹಿತ್ಯ ಮತ್ತು ಯಂತ್ರ ಸಾಹಿತ್ಯ ಎಂದು ವಿಭಾಗಿಸಿಕೊಂಡು ವಿಶ್ಲೇಷಣೆಯನ್ನು ಈ ಲೇಖನದಲ್ಲಿ ಮಾಡಲಾಗಿದೆ.

೫. ಬುಡಕಟ್ಟು ಅಭಿವೃದ್ಧಿಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ೨೦೦೪, ಪ್ರ.ಪ್ರಸಾರಾಂಗ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕರ್ನಾಟಕ ಸರ್ಕಾರ, ಭಾರತ ಸರ್ಕಾರ ಹಾಗೂ ಅನೇಕ ಸ್ವಯಂ ಸೇವಾ ಸಂಸ್ಥೆಗಳು ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗಾಗಿ ಐದಾರು ದಶಕಗಳಿಂದ ಪ್ರಯತ್ನಿಸುತ್ತಲೇ ಬಂದಿವೆ. ದಾಖಲೆಗಳಲ್ಲಿ ಅಭಿವೃದ್ಧಿಯ ಬಗೆಗೆ ಮಾಹಿತಿ ದೊರೆಯುತ್ತದೆ. ಆದರೆ ಬುಡಕಟ್ಟುಗಳ ಪ್ರದೇಶಗಳಿಗೆ ಹೋಗಿ ವೀಕ್ಷಿಸಿದರು ಅಲ್ಲಿ ಕಳಪೆ ಮಟ್ಟದ ಅಭಿವೃದ್ಧಿಯಾಗಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣಗಳೇನು ಎಂಬುದನ್ನು ಈ ಲೇಖನದಲ್ಲಿ ವಿಶ್ಲೇಷಣೆ ಮಾಡುವ ಪ್ರಯತ್ನ ಮಾಡಲಾಗಿದೆ.

೬. ಕುರುಗೋಡು ಪರಿಸರದ ಮೌಖಿಕ ಸಾಹಿತ್ಯ ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ ಕುರುಗೋಡು, ೨೦೦೪, ಪ್ರ.ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚರಿತ್ರೆಯನ್ನು ನಿರ್ಮಾಣ ಮಾಡುವಲ್ಲಿ ಶಾಸನಗಳು, ಹಸ್ತಪ್ರತಿಗಳು, ಸ್ಮಾರಕಗಳನ್ನು ಮಾತ್ರ ಪರಿಗಣಿಸಿ ಆ ಪ್ರದೇಶದ ಇತಿಹಾಸವನ್ನು ದಾಖಲಿಸುವ ಪರಂಪರೆ ಒಂದು ಕಾಲಕ್ಕಿತ್ತು. ಈಗ ಅನೇಕ ಇತಿಹಾಸ ತಜ್ಞರು ಚರಿತ್ರೆಯನ್ನು ಬರೆಯುವಾಗ ಆ ಪರಿಸರದ ಮೌಖಿಕ ಸಾಹಿತ್ಯವನ್ನು ಗಮನದಲ್ಲಿಟ್ಟುಕೊಳ್ಳುತ್ತಿದ್ದಾರೆ. ಮೌಖಿಕ ಸಾಹಿತ್ಯವು ಇತಿಹಾಸ ತಜ್ಞರಿಗೆ ಹೇಗೆ ಆಕರ ಸಾಮಗ್ರಿಗಳಾಗುತ್ತವೆ ಎಂಬುದನ್ನು ಕುರುಗೋಡು ಪರಿಸರದ ಮೌಖಿಕ ಸಾಹಿತ್ಯದ ಮೂಲಕ ವಿವರಿಸಲಾಗಿದೆ.

೭. ಚಲನಚಿತ್ರದಲ್ಲಿ ಜಾನಪದ ಸಾಹಿತ್ಯದ ಬಳಕೆ ಜಾನಪದ ಕರ್ನಾಟಕ, ೨೦೦೫, ಪ್ರ.ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚಲನಚಿತ್ರ ಮಾಧ್ಯಮ ತನ್ನ ಪ್ರಾರಂಭದ ಘಟ್ಟದಿಂದಲೇ ಜಾನಪದ ಸಾಹಿತ್ಯದ ಪ್ರಭಾವ ಪ್ರೇರಣೆಯನ್ನು ಹೇಗೆ ಪಡೆದುಕೊಂಡು ಬೆಳೆಯುತ್ತ ಬಂದಿದೆ. ಪೌರಾಣಿಕ ಚಿತ್ರಗಳ ರಚನೆಗೆ ಅಂದು ಪ್ರಚಾರದಲ್ಲಿದ್ದ ಬಯಲಾಟಗಳು ಹೇಗೆ ಪ್ರೇರಣೆ ನೀಡಿವೆ. ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಅದ್ಭುತ ಹಾಗೂ ರಮ್ಯ ಕಥಾವಸ್ತುಗಳನ್ನು ಹೊಂದಿದ ಅನೇಕ ಚಲನಚಿತ್ರಗಳ ಹಾಡುಗಳಲ್ಲಿ ನೂರಾರು ಜಾನಪದದ ಲಯ, ಧಾಟಿ, ತಾಳಗಳನ್ನು ಸಂಗೀತ ಸಾಹಿತ್ಯ ಮತ್ತು ಚಿತ್ರ ನಿರ್ದೇಶಕರು ಹೇಗೆ ಬಳಸಿಕೊಂಡಿದ್ದಾರೆ ಎಂಬುದನ್ನು ಈ ಲೇಖನದಲ್ಲಿ ವಿವರಿಸಲಾಗಿದೆ.

೮. ಜಾನಪದ ರಂಗಭೂಮಿಯಲ್ಲಿ ಮಹಿಳೆ ಜಾನಪದ ಕರ್ನಾಟಕ, ೨೦೦೬, ಪ್ರ.ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಣ್ಣಾಟದ ರಂಗಭೂಮಿಗೆ ಮಹಿಳೆ ನೀಡಿದ ಕೊಡುಗೆ ಅಪಾರವಾದದ್ದು, ಸಣ್ಣಾಟದ ರಂಗಭೂಮಿಯನ್ನು ಮೊದಲು ಧೈರ್ಯದಿಂದ ಪ್ರವೇಶಿಸಿದ ಕೀರ್ತಿ ಕೌಜಲಗಿ ನಿಂಗಮ್ಮನದು. ಶ್ರೀಕೃಷ್ಣಪಾರಿಜಾತವನ್ನು ಪ್ರವೇಶಿಸಿ ಅದನ್ನು ಜನಪ್ರಿಯಗೊಳಿಸಿ ನಂತರ ಹಂತಹಂತವಾಗಿ ಅನೇಕ ಮಹಿಳೆಯರು ಸಣ್ಣಾಟದ ರಂಗಭೂಮಿಯನ್ನು ಪ್ರವೇಶಿಸಲು ಹಾಗೂ ಅದನ್ನು ಶ್ರೀಮಂತಗೊಳಿಸಲು ಪ್ರಭಾವ ಬೀರಿದವಳು. ಸಣ್ಣಾಟದ ರಂಗಭೂಮಿಯಲ್ಲಿ ಮಹಿಳೆಯ ಪ್ರವೇಶದಿಂದಾದ ಬದಲಾವಣೆಗಳನ್ನು ಕುರಿತು ಈ ಲೇಖನದಲ್ಲಿ ವಿವರಿಸಲಾಗಿದೆ.

೯. ಆದಿವಾಸಿಗಳ ವೈದ್ಯ ಪರಂಪರೆ ಆದಿವಾಸಿ ಅಖ್ಯಾನ, ೨೦೦೮, ಸಿದ್ದಾರ್ಥ ಪ್ರಕಾಶನ, ಹೊಸಪೇಟೆ

ವೈದ್ಯ ವಿದ್ಯೆ ಮಾನವನಷ್ಟೇ ಪ್ರಾಚೀನವಾದದ್ದು ಮತ್ತು ಮಾನವನೊಂದಿಗೆ ಹುಟ್ಟಿ ಬಂದಿರುವಂತಹದ್ದು. ಈ ವೈದ್ಯಕೀಯ ಜ್ಞಾನ ಮಾನವನ ಪ್ರಯತ್ನಗಳು ಬೆಳೆದಂತೆಲ್ಲಾ ಅದು ಬೆಳೆಯಿತು. ಈ ಪಾರಂಪರಿಕ ವೈದ್ಯಕೀಯ ಜ್ಞಾನ ಒಬ್ಬ ವ್ಯಕ್ತಿಯಿಂದಾಗಲೀಎ ಒಂದು ಸಮೂಹದಿಂದಾಗಲಿ ಬೆಳೆದು ಬಂದಿರುವಂತಹದ್ದಲ್ಲ. ಈ ಜ್ಞಾನ ಶಾಖೆಯ ಹಿಂದೆ ಹಲವಾರು ಆದಿವಾಸಿ ಸಮುದಾಯಗಳ ವಿಶಿಷ್ಟವಾದ ಅನುಭವಗಳು ಇವೆ. ಜಗತ್ತಿನ ವೈದ್ಯಕೀಯ ಪರಂಪರೆಗೆ ಆದಿವಾಸಿಗಳ ವೈದ್ಯಪದ್ಧತಿ ವಿಶೇಷವಾದ ಕೊಡುಗೆಯನ್ನು ನೀಡಿದೆ. ವೈದ್ಯವಿದ್ಯೆ ಸಿಂಧೂ ಸಂಸ್ಕೃತಿ, ವೇದ ಸಂಸ್ಕೃತಿಗಳಲ್ಲಿ ರೂಪ ಪಡೆಯುವುದಕ್ಕಿಂತ ಮೊದಲೇ ಆದಿವಾಸಿ ಸಮುದಾಯಗಳಲ್ಲಿ ವೈದ್ಯಪದ್ಧತಿ ಇತ್ತು. ವೇದ ಕಾಲದಲ್ಲಿ ಆದಿವಾಸಿಗಳ ವೈದ್ಯ ಪದ್ಧತಿಯನ್ನೇ ಅಧ್ಯಯನಕ್ಕೊಳಪಡಿಸಿ ಪರಿಷ್ಕರಿಸಿ ಅದಕ್ಕೆ ಆಯುರ್ವೇದ ಎಂದು ಹೆಸರಿಸಿದರು. ವೈದ್ಯವಿದ್ಯೆಗೆ ಬುನಾದಿ ಹಾಕಿದ ಆದಿವಾಸಿಗಳ ವೈದ್ಯಕೀಯ ಜ್ಞಾನ ಇಂದು ಹೇಗಿದೆ ಎಂಬುದನ್ನು ಕುರಿತು ಈ ಲೇಖನದಲ್ಲಿ ವಿವರಿಸುವ ಪ್ರಯತ್ನ ಮಾಡಲಾಗಿದೆ.

೧೦. ಭಾರತೀಯ ಸಂಸ್ಕೃತಿಯಲ್ಲಿ ವಿಶ್ವಕರ್ಮರು ವಿಶ್ವಕರ್ಮ ಮಾಸಪತ್ರಿಕೆ

ವಿಶ್ವಕರ್ಮರನ್ನು ಪಂಚಾಳರು, ವಿಶ್ವಬ್ರಾಹ್ಮಣರು ಎಂದು ಕರೆಯುತ್ತಾರೆ. ಇವರು ಕಮ್ಮಾರಿಕೆ, ಬಡಿಗಿತನ, ಕಂಚುಗಾರಿಕೆ, ಶಿಲಾಶಿಲ್ಪ ಹಾಗೂ ಸುವರ್ಣ ಶಿಲ್ಪದ ವೃತ್ತಿಗಳನ್ನು ಸಾವಿರಾರು ವರ್ಷಗಳಿಂದ ಮುಂದುವರೆಸಿಕೊಂಡು ಬಂದಿದ್ದಾರೆ. ಸಾವಿರಾರು ಶಿಲ್ಪಿಗಳು ಅನೇಕ ದೇವಸ್ಥಾನಗಳನ್ನು ಕಟ್ಟಿ ರಾಜ ಮಹಾರಾಜರ ಕನಸುಗಳನ್ನು ನನಸು ಮಾಡಿ ಎಲೆ



PDF created with pdfFactory trial version www.pdffactory.com

ಮರೆಯ ಕಾಯಿಯಂತೆ ಬದುಕಿ ಬಾಳಿದವರಾಗಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿಕರಿಗೆ ಬೇಕಾಗುವ ಅನೇಕ ವಸ್ತುಗಳನ್ನು ಸಿದ್ಧಪಡಿಸಿಕೊಟ್ಟು ಕೃಷಿ ಸಂಸ್ಕೃತಿಗೆ ಬೆನ್ನೆಲುಬಾಗಿದ್ದಾರೆ. ಪ್ರತಿಯೊಂದು ಕ್ಷೇತ್ರದಲ್ಲೂ ಗುರುತಿಸಿಕೊಂಡಿರುವ ವಿಶ್ವಕರ್ಮರು ಈ ನಾಡಿಗೆ ಹಾಗೂ ಸಂಸ್ಕೃತಿಗೆ ನೀಡಿದ ಅಪೂರ್ವ ಕೊಡುಗೆಗಳನ್ನು ಕುರಿತು ಈ ಲೇಖನದಲ್ಲಿ ವಿವರಿಸಲಾಗಿದೆ.

**೧೬. ಪಿಎಚ್.ಡಿ ಮಾರ್ಗದರ್ಶನ**

**ಅಭ್ಯರ್ಥಿಗಳು ಶೀರ್ಷಿಕೆ ಪದವಿಘೋಷಿಸಿದ ದಿನಾಂಕ**

೧. ಗೌಡರ್ ಸೋಮಶೇಖರಪ್ಪಾ ಸಾಮಾಜಿಕ ಬದಲಾವಣೆಯಲ್ಲಿ ಸಿಳ್ಳೇಕ್ಯಾತರು ಕಿಳ್ಳೇಕ್ಯಾತರು, ೧೯.೦೮.೨೦೦೮

ತೊಗಲು ಗೊಂಬೆಯಾಟದವರು, ಸಿಳ್ಳೇಕ್ಯಾತರು, ಶಿಳ್ಳೇಕ್ಯಾತರು, ಕಿಳ್ಳೇಕ್ಯಾತರು, ಗೊಂಬೆರಾಮರು, ಮರಾಠ ಒಕ್ಕಲಿಗರು, ಚಿತ್ರಮರಾಠರು, ಕಟುಬರು ಮುಂತಾದ ಹೆಸರುಗಳಿಂದ ಕರೆಯಲ್ಪಡುವ ಅಲೆಮಾರಿ, ಅರೆಅಲೆಮಾರಿಯಾದ ಈ ಸಮುದಾಯದ ಮಹಾರಾಷ್ಟ್ರದಿಂದ ರಾಜಕೀಯ, ಆರ್ಥಿಕ, ನೈಸರ್ಗಿಕ, ವಿಕೋಪ ಮುಂತಾದ ಕಾರಣಗಳಿಂದ ಕರ್ನಾಟಕ್ಕೆ ವಲಸೆ ಬಂದಿದ್ದಾರೆ. ಈ ಪ್ರಬಂಧದಲ್ಲಿ ಕರ್ನಾಟಕದ ಬಳ್ಳಾರಿ, ಧಾರವಾಡ, ಗದಗ, ಮಂಡ್ಯ, ಕೊಪ್ಪಳ, ರಾಯಚೂರು, ದಾವಣಗೆರೆ ಹಾಗೂ ಹಾವೇರಿ ಜಿಲ್ಲೆಯ ಒಟ್ಟು ೧೭ ತಾಲೂಕುಗಳಲ್ಲಿಯ ೩೮ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ವರ್ತಮಾನದಲ್ಲಿ ಸಿಳ್ಳೀಕ್ಯಾತರ ಸ್ಥಿತಿಗತಿಗಳು ಹೇಗಿವೆ ಆಧುನಿಕತೆಯ ಪರಿಸರಕ್ಕೆ ಮುಖಾಮುಖಿಯಾಗುತ್ತಿರುವ ಇವರ ಬದುಕಿನಲ್ಲಾದ ಸ್ಥಿತ್ಯಂತರಗಳು ಯಾವವು ಸಿಳ್ಳೇಕ್ಯಾತರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ರಾಜಕೀಯ ಮತ್ತು ಇವರ ಮೂಲ ವೃತ್ತಿಯಾದ ತೊಗಲುಗೊಂಬೆಯಾಟದ ಪ್ರಾಚೀನತೆ, ವೈಶಿಷ್ಟ್ಯತೆ, ಗೊಂಬೆಗಳ ರಚನೆ, ನಿರ್ಮಾಣ ಹಾಗೂ ಕಲಾವಿದರ ಸ್ಥಿತಿಗತಿಗಳು ಹೇಗಿವೆ ಎಂಬುದನ್ನು ಈ ಪ್ರಬಂಧದಲ್ಲಿ ಅಧ್ಯಯನ ಮಾಡಲಾಗಿದೆ.

೨. ಗೋವಿಂದರಾಜ ಲಿಂಗಣ್ಣ ಕನ್ನಡ ಕಾದಂಬರಿಗಳಲ್ಲಿ ಆದಿವಾಸಿ ಸಂವೇದನೆಗಳು, ೧೮೩೧೨.೨೦೦೮

ನವೋದಯ, ಪ್ರಗತಿಶೀಲ ಮತ್ತು ನವ್ಯ ಕಾಲಘಟ್ಟದ ಲೇಖಕರು ಆದಿವಾಸಿಗಳ ಬದುಕು ಮತ್ತು ಅವರ ಸಂಸ್ಕೃತಿಯ ವಿಮೋಚನೆ ಕುರಿತಂತೆ ತಾಳಿರುವ ನಿಲುವು ಮತ್ತು ಚಿಂತನೆಗಳನ್ನು ಹಾಗೂ ಅವರ ಬಗ್ಗೆ ವ್ಯಕ್ತಪಡಿಸುವ ಧೋರಣೆಗಳನ್ನೂ ಕಾದಂಬರಿಯ ಕಾಲಘಟ್ಟವನ್ನು ವಿಭಾಗಿಸದೆ ಒಟ್ಟಾಗಿ ಅವರ ತಾತ್ವಿಕಗವಾದ ನೆಲೆಯಲ್ಲಿ ಪರಿಹರಿಸಿಕೊಳ್ಳುವುದನ್ನು ಈ ಪ್ರಬಂಧದಲ್ಲಿ ಕೈಕೊಳ್ಳಲಾಗಿದೆ. ಆದಿವಾಸಿಗಳ ಸೃಜನಶೀಲತೆ, ಜನಪದ ಸಾಹಿತ್ಯ, ಭೌತಿಕ ಸಂಸ್ಕೃತಿ, ಸಾಮಾಜಿಕ ನೆಲೆಯಲ್ಲಿ ಹುಟ್ಟಿಕೊಂಡ ವಿಭಿನ್ನ ಸಂಪ್ರದಾಯಗಳು, ಆದಿವಾಸಿಗಳ ಕುಲಕಸಬುಗಳು, ಆರ್ಥಿಕತೆ, ಆಹಾರ ಪದ್ಧತಿ ಮತ್ತು ಆ ಸಮುದಾಯದ ಮೂಲ ಸ್ವಭಾವಗಳನ್ನು ಕುರಿತು ಲೇಖಕರ ಚಿಂತನೆಗಳೇನು ಆದಿವಾಸಿಗಳ ಚಿಂತನೆಗಳೇನು ಅಲ್ಲದೆ ಈ ಸಮುದಾಯಗಳ ಮೂಲ ಸಮಸ್ಯೆಗಳು ಯಾವವು ಎಂಬ ಅನೇಕ ವಿಚಾರಗಳನ್ನು ೧೬ ಕಾದಂಬರಿಗಳ ಮೂಲಕ ಅಧ್ಯಯನಕ್ಕೊಳಪಡಿಸಲಾಗಿದೆ.

೩. ವಿಮಲಾ ಅಮಲಪ್ಪ ಕಾಡುಗೊಲ್ಲರ ಆರ್ಥಿಕ ಸ್ಥಿತಿಗತಿಗಳು, ೧೮.೦೫.೨೦೦೯

ಕಾಡುಗೊಲ್ಲರು ಮೂಲತಃ ಪಶಪಾಲಕರು. ಕೈಗಾರಿಕೀರಣ, ಖಾಸಗೀಕರಣ, ವೈಜ್ಞಾನಿಕೀಕರಣ, ಜಾಗತೀಕರಣ ಹಾಗೂ ಅರಣ್ಯ ನಾಶವಾಗುತ್ತಿರು ಈ ಆಧುನಿಕ ಸಂದರ್ಭದಲ್ಲಿ ಕಾಡುಗೊಲ್ಲರ ಸಮುದಾಯವು ತನ್ನ ಮೂಲ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದರ ಜೊತೆಗೆ ಆಧುನಿಕತೆಗೆ ಮುಖಾಮುಖಿಯಗುತ್ತಾ ತನ್ನ ಅಸ್ಥಿತ್ವ ಉಳಿಸಿಕೊಳ್ಳಲು ಹೋರಾಡುತ್ತಿದೆ. ಬುಡಕಟ್ಟಿನ ಎಲ್ಲ ಲಕ್ಷಣಗಳನ್ನೂ ಈ ಸಮುದಾಯ ಹೊಂದಿದ್ದರೂ ಇವರನ್ನು ಸರ್ಕಾರ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸಿಲ್ಲ. ಸರ್ಕಾರದ ಯಾವ ಸೌಲಭ್ಯಗಳು ಸಿಗದೇ ಇದ್ದರೂ ತಮ್ಮ ಮೂಲ ವೃತ್ತಿ ಪಶುಪಾಲನೆ ಹಾಗೂ ಪಾರಂಪರಿಕ ಕೃಷಿಯ ಮೂಲಕ ಬದುಕು ಸಾಗಿಸುತ್ತಿದ್ದಾರೆ. ಪಶುಪಾಲನೆಗಾಗಿ ಗೋಮಾಳಗಳಿಲ್ಲ. ಹೀಗಾಗಿ ಪಶುಪಾಲನೆ ಕಡಿಮೆಯಾಗುತ್ತಿದೆ. ಮಳೆಯಾದಾರಿತ ಹಾಗೂ ಪಾರಂಪರಿಕ ಕೃಷಿಯಿಂದ ಉತ್ಪಾದನೆ ಬಹಳ ಕಡಿಮೆಯಾಗಿದೆ. ಇಂತಹ ಸಮುದಾಯದ ಆರ್ಥಿಕ ಚಟುವಟಿಕೆಗಳು ಇಂದು ಯಾವ ಸ್ಥಿತಿಯಲ್ಲಿವೆ ಮತ್ತು ಇವರ ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಬದುಕು ಹೇಗಿದೆ. ಎಂಬುದನ್ನು ಕುರಿತು ಈ ಪ್ರಬಂಧದಲ್ಲಿ ಅಧ್ಯಯನ ಮಾಡಲಾಗಿದೆ.

**೧೭. ಎಂ.ಫಿಲ್ ಮಾರ್ಗದರ್ಶನ**

**ಅಭ್ಯರ್ಥಿಗಳು ಶೀರ್ಷಿಕೆ ಪದವಿಘೋಷಿಸಿದ ದಿನಾಂಕ**

೧. ಎನ್. ಕಲ್ಲಪ್ಪ ಅಡ್ಲಟ್ಟಿ ಮ್ಯಾಸಬೇಡರು ಒಂದು ಸಮುದಾಯ ಅಧ್ಯಯನ, ೨೦೦೩

ಅಡ್ಲಟ್ಟಿ ಮ್ಯಾಸಬೇಡರು ಎಂದೇ ಗುರುತಿಸಿಕೊಂಡಿರುವ ಈ ಸಮುದಾಯ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ದೇವರಮರಿಕುಂಟೆ, ನಾಗ್ತಿಹಳ್ಳಿ, ಕಟ್ಟೆ, ಅಡ್ಲಟ್ಟಿ, ಸಾಣೀಕೆರೆ, ವಡೇರಹಳ್ಳಿ ಮತ್ತು ಹಿರಿಯೂರು ತಾಲೂಕಿನ ಹುಚ್ಚವ್ವನಹಳ್ಳಿಯಲ್ಲಿ ಕಂಡುಬರುತ್ತಾರೆ. ಇವರಿಗೆ ಅಡ್ಲಟ್ಟಿ ಮ್ಯಾಸಬೇಡರು ಎಂದು ಏಕೆ ಕರೆಯುತ್ತಾರೆ, ಅಡ್ಲಟ್ಟಿ ಮ್ಯಾಸಬೇಡರಿಗೂ ಮತ್ತು ಕಾಡುಗೊಲ್ಲರಿಗೂ ಇರುವ ಸಂಬಂಧಗಳೇನು, ಅಡ್ಲಟ್ಟಿ ಮ್ಯಾಸಬೇಡರಿಗೂ ಮತ್ತು ಮ್ಯಾಸಬೇಡರಿಗೂ ಇರುವ ಸಂಬಂಧಗಳು, ಅಡ್ಲಟ್ಟಿ ಮ್ಯಾಸಬೇಡರ ಸಾಮಾಜಿಕ, ಶೈಕ್ಷಣಿಕ, ಮತ್ತು ಧಾರ್ಮಿಕ ಸ್ಥಿತಿಗತಿಗಳು, ಜನಸಂಖ್ಯೆ, ಹಾಗೂ ಇವರ ಸಮಸ್ಯೆಗಳನ್ನು ಕುರಿತು ಈ ಪ್ರಬಂಧದಲ್ಲಿ ಅಧ್ಯಯನ ಕೈಕೊಳ್ಳಲಾಗಿದೆ.



PDF created with pdfFactory trial version www.pdffactory.com

೨. ಶಿವಾನಂದ ಕೆಂಪಳ್ಳೇರ್ ದೀವರ ಸಮುದಾಯದ ಕೃಷಿ ಆಚರಣೆಗಳು, ೨೦೦೪

ಶಿವಮೊಗ್ಗ ಜಿಲ್ಲೆಯಲ್ಲಿ ಅಧಿಕ ಪ್ರಮಾಣದಲ್ಲಿ ಕಂಡುಬರುವ ದೀವರು ಮೂಲತಃ ಕೃಷಿ ಸಮುದಾಯದವರು. ಈಚಲುಮರ, ಬಗನಿಮರ ಹಾಗೂ ತೆಂಗಿನಮರಗಳಿಂದ ಹೆಂಡ ಇಳಿಸುವ ವೃತ್ತಿಯನ್ನೂ ಒಂದು ಕಾಲಕ್ಕೆ ಇವರು ಮಾಡುತ್ತಿದ್ದರೆಂದು ತಿಳಿಯುತ್ತದೆ. ಕೃಷಿಯನ್ನೇ ಮುಖ್ಯ ವೃತ್ತಿಯಾಗಿಸಿಕೊಂಡು ದೀವರಲ್ಲಿ ಪಾರಂಪರಿಕ ಕೃಷಿ ಜ್ಞಾನ ಹೇಗಿತ್ತು. ಅವರು ಬೆಳೆಯುತ್ತಿರುವ ಬೆಳೆಗಳು ಯಾವವು, ಯಾವ ಯಾವ ತಳಿಗಳ ಬತ್ತವನ್ನು ಬೆಳೆಯುತ್ತಾರೆ, ಇವರಲ್ಲಿ ಕೃಷಿಗೆ ಸಂಬಂಧಿಸಿದ ಆಚರಣೆಗಳು ಹೀಗಿವೆ, ಬೆಳೆದ ಬೆಳೆಯನ್ನು ಮಾರಾಟ ಮಾಡಲು ಮಾರ್ಕೆಟ್ ವ್ಯವಸ್ಥೆ ಹೇಗಿದೆ ಮುಂತಾದ ವಿಚಾರಗಳನ್ನು ಕುರಿತು ಈ ಪ್ರಬಂಧದಲ್ಲಿ ಅಧ್ಯಯನ ಮಾಡಲಾಗಿದೆ.

೩. ದೊಡ್ಡಬಸಮ್ಮ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಬುಡಕಟ್ಟುಗಳ ರಾಜಕೀಯ ಸ್ಥಿತಿಗತಿಗಳು ಗಂಗಾವತಿ ತಾಲೂಕಿನ ಗ್ರಾಮ ಪಂಚಾಯತಿಗಳನ್ನು ಅನುಲಕ್ಷಿಸಿ ೨೦೦೮

ಕರ್ನಾಟಕದಲ್ಲಿ ಬುಡಕಟ್ಟುಗಳ ರಾಜಕೀಯ ಸ್ಥಿತಿಗತಿಗಳು ಹೇಗಿವೆ ಎಂಬುದನ್ನು ಕುರಿತಾದ ಅಧ್ಯಯನಗಳು ಕಡಿಮೆ. ವೈಜ್ಞಾನೀಕರಣ, ನಗರೀಕರಣ, ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಸಾಮಾನ್ಯವಾಗಿ ಎಲ್ಲ ಸಮುದಾಯಗಳು ರಾಜಕೀಯವಾಗಿ ಗುರುತಿಸಿಕೊಂಡು ಬೆಳೆಯಲಿಕ್ಕೆ ಪ್ರಯತ್ನಿಸುತ್ತಿವೆ. ಈ ಹಿನ್ನೆಲೆಯಲ್ಲಿ ಗಂಗಾವತಿ ತಾಲೂಕಿನ ಗ್ರಾಮ ಪಂಚಾಯತಿಗಳ ಮೂಲಕ ಈ ಪ್ರದೇಶದ ಬುಡಕಟ್ಟು ಸಮುದಾಯಗಳು ರಾಜಕೀಯವಾಗಿ ತಮ್ಮ ಅಸ್ಥಿತ್ವಗಳನ್ನು ಹೇಗೆ ಗುರುತಿಸಿಕೊಳ್ಳುತ್ತಿವೆ. ಮತ್ತು ಇವರು ಹೇಗೆ ಅಭಿವೃದ್ಧಿ ಹೊಂದುತ್ತಿದ್ದಾರೆ. ಗ್ರಾಮ ಪಂಚಾಯತ್ ಮಟ್ಟದಲ್ಲಿ ಇವರು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಸವಾಲುಗಳು ಯಾವವು ಮುಂತಾದ ವಿಚಾರಗಳನ್ನು ಕುರಿತು ಈ ಪ್ರಬಂಧದಲ್ಲಿ ಅಧ್ಯಯನ ಮಾಡಲಾಗಿದೆ.

೪. ಉಮೇಶ್ ಎಂ.ಓ ಮ್ಯಾಸಬೇಡ ಸಮುದಾಯ ಹಾಗೂ ಜಗಳೂರು ಪಾಪನಾಯಕ ಒಂದು ಸಾಂಸ್ಕೃತಿಕ ಅಧ್ಯಯನ ೨೦೦೮

ಮ್ಯಾಸಬೇಡರ ಸಮುದಾಯದ ಸಾಂಸ್ಕೃತಿಕ ನಾಯಕ ಹಾಗೂ ಆರಾಧ್ಯ ದೈವವಾದ ಜಗಳೂರು ಪಾಪನಾಯಕನನ್ನು ಕುರಿತು ಅನೇಕ ನಂಬಿಕೆ, ಸಂಪ್ರದಾಯಗಳು, ಆಚರಣೆಗಳು ಇರುವುದು ಕಂಡುಬರುತ್ತವೆ. ಜಗಳೂರು ಪಾಪನಾಯಕನನ್ನು ಕುರಿತಾದ ಪಾರಂಪರಿಕ ಆಚರಣೆಗಳಿಗೆ ಆಧುನಿಕತೆಯ ಸ್ಪರ್ಷ ನೀಡಲಾಗುತ್ತಿದೆ. ಪಾರಂಪರಿಕ ಆಚರಣೆಗಳು ಯಾವ ರೀತಿ ಬದಲಾವಣೆಗಳನ್ನು ಹೊಂದುತ್ತಿವೆ, ಜಗಳೂರು ಪಾಪನಾಯಕ ಇಂದು ಮ್ಯಾಸಬೇಡರಿಗೆ ಮಾತ್ರವಲ್ಲದೇ ಇತರೆ ಎಲ್ಲ ಸಮುದಾಯಗಳ ದೈವವಾಗಿ ಹೇಗೆ ರೂಪಗೊಳ್ಳುತ್ತಿದ್ದಾನೆ, ಕೃಷಿ ಸಂಸ್ಕೃತಿಯಲ್ಲಿ ಈ ದೈವದ ಪಾತ್ರವೇನು, ಮ್ಯಾಸಬೇಡರಲ್ಲಿ ಇತರೆ ಅನೇಕ ದೈವಗಳು ಕಂಡುಬರುತ್ತವೆ. ಈ ದೈವಗಳಿಗೂ ಹಾಗೂ ಜಗಳೂರು ಪಾಪನಾಯಕನಿಗೂ ಇರುವ ವ್ಯತ್ಯಾಸಗಳೇನು ಎಂಬುದನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

### ೧೮. ಶೈಕ್ಷಣಿಕ ಉದ್ದೇಶಕ್ಕಾಗಿ (ವಿಶ್ವವಿದ್ಯಾಲಯ ಹೊರತುಪಡಿಸಿ) ನಿರ್ವಹಿಸಿದ ಯೋಜನೆಗಳು

೧. ಶಿರಸಂಗಿ ಕಾಳಮ್ಮ ಸಾಂಸ್ಕೃತಿಕ ಅಧ್ಯಯನ ಆರಾಧನೆ ಪರಂಪರೆ

ಕರ್ನಾಟಕದ ಶಕ್ತಿ ಪೀಠಗಳಲ್ಲಿ ಒಂದಾದ ಹಾಗೂ ವಿಶ್ವಕರ್ಮ ಸಮುದಾಯದ ಕುಲದೈವವಾಗಿರುವ ಶಿರಸಂಗಯ ಕಾಳಮ್ಮನನ್ನು ಕುರಿತಾದ ವಿಸ್ತ್ರತ ಅಧ್ಯಯನ ಇದಾಗದೆ. ಶಿರಸಂಗಿಯಲ್ಲಿ ಕಾಳಮ್ಮನು ನೆಲೆಗೊಳ್ಳಲಿಕ್ಕೆ ಕಾರಣಗಳೇನು ವಿಶ್ವಕರ್ಮರಿಗೂ ಈ ಕಾಳಮ್ಮನಿಗೂ ಇರುವ ಸಂಬಂಧ ಎಂಥಹದ್ದು ಶಿರಸಂಗಿಯಲ್ಲಿ ವರ್ಷದುದ್ದಕ್ಕೂ ನಡೆಯುವ ಆಚರಣೆಗಳು ಯಾವವು ಯುಗಾದಿಯಲ್ಲಿ ವಿಶಿಷ್ಟಾಗಿ ಆಚರಿಸುವ ಆಚರಣೆಗಳು, ಭಾರತೀಯ ಸಂಸ್ಕೃತಿಗೆ ವಿಶ್ವಕರ್ಮರು ನೀಡಿದ ಕೊಡುಗೆಗಳು ಮುಂತಾದವುಗಳನ್ನು ಕುರಿತು ಅಧ್ಯಯನ ಕೈಕೊಳ್ಳಲಾಗಿದೆ.

೨. ಜನಪದ ರಂಗಭೂಮಿಯಲ್ಲಿ ಮಹಿಳೆ

ಜನಪದ ರಂಗಭೂಮಿ ಅದರಲ್ಲೂ ಸಣ್ಣಾಟದ ರಂಗಭೂಮಿಗೆ ಮಹಿಳೆ ನೀಡಿದ ಕೊಡುಗೆ ಅಪಾರವಾದದ್ದು. ಸಣ್ಣಾಟದ ರಂಗಭೂಮಿಯನ್ನು ಮೊದಲು ಧೈರ್ಯದಿಂದ ಪ್ರವೇಶಿಸಿದ ಕೀರ್ತಿ ಕೌಜಲಗಿ ನಿಂಗಮ್ಮನಿಗೆ ಸಲ್ಲುತ್ತದೆ. ಶ್ರೀಕೃಷ್ಣಪಾರಿಜಾತವನ್ನು ಪ್ರವೇಶಿಸಿ ಅದನ್ನು ಶ್ರೀಮಂತಗೊಳಿಸಲು ಕಾರಣಳಾದವಳು ಕೌಜಲಗಿ ನಿಂಗಮ್ಮ. ಸಣ್ಣಾಟದ ರಂಗಭೂಮಿಯಲ್ಲಿ ಮಹಿಳೆಯ ಪ್ರವೇಶದಿಂದಾಗ ಈ ರಂಗಭೂಮಿಯಲ್ಲಾದ ಬದಲಾವಣೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

೩. ಹಕ್ಕಿಪಿಕ್ಕಿಯರು ಆಧುನಿಕ ಮುಖಾಮುಖಿ

ಅಲೆಮಾರಿ ಹಾಗೂ ಅರೆಅಲೆಮಾರಿ ಬುಡಕಟ್ಟು ಸಮುದಾಯವಾದ ಹಕ್ಕಿಪಿಕ್ಕಿಯರನ್ನೂ ಸಹ ಬ್ರಿಟೀಷರು ಅಪರಾಧಿ ಬುಡಕಟ್ಟಿನ ಪಟ್ಟಿಗೆ ಸೇರಿಸಿದ್ದರು. ಹಕ್ಕಿಪಿಕ್ಕಿಯರನ್ನು ಪಾರದಿ, ಮೇವಾರಿ ಎಂದೂ ಕರೆಯುವರು. ಇವರ ಮೂಲ ವೃತ್ತಿ ಬೇಟೆಯಾಗಿತ್ತು. ಹಕ್ಕಗಳನ್ನು ಅತ್ಯಂತ ಚಾಣಾಕ್ಷತನದಿಂದ ಹಿಡಿಯುವ ಕಲೆಯನ್ನು ಇವರು ಬಲ್ಲವರಾಗದ್ದರು. ಈ ಕಾರಣಕ್ಕಾಗಿ ಸ್ಥಳೀಯರು ಇವರನ್ನು ಹಕ್ಕಿಪಿಕ್ಕಿಯರು ಎಂದು ಕರೆದಿರಬೇಕು. ಮೂಲತಃ ಇವರು ಕರ್ನಾಟಕದವರಲ್ಲ. ಉತ್ತರ ಭಾರತದಿಂದ ಆಹಾರಕ್ಕಾಗಿ ಅಲೆಯುತ್ತಾ ಕರ್ನಾಟಕಕ್ಕೆ ವಲಸೆ ಬಂದಿದ್ದಾರೆ. ಹಕ್ಕಿಪಿಕ್ಕಿಯರು ಇಂದು ಆಧುನಿಕತೆಗೆ ಮುಖಾಮುಖಿಯಾಗುತ್ತಿರುವ ಸಂದರ್ಭದಲ್ಲಿ ಅವರ ಬದುಕಿನಲ್ಲಾಗಿರುವ ಸ್ಥಿತ್ಯಂತರಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.



PDF created with pdfFactory trial version www.pdffactory.com

೪. ಅಲೆಮಾರಿ ಅರೆ ಅಲೆಮಾರಿ ಗೊಂದಲಿಗರ ಅಧ್ಯಯನ

ಅಲೆಮಾರಿ ಹಾಗೂ ಅರೆ ಅಲೆಮಾರಿ ಬುಡಕಟ್ಟು ಸಮುದಾಯವಾದ ಗೊಂದಲಿಗರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿಗಳು ಹೇಗಿವೆ ಎಂಬುದನ್ನು ಕುರಿತು ಅಧ್ಯಯನ ಮಾಡಲಾಗಿದೆ. ಗೊಂದಲಿಗರು ಮೂಲತಃ ವೃತ್ತಿ ಕಲಾವಿದರು. ಮಂಗಲಕಾರ್ಯಗಳಲ್ಲಿ ಗೊಂದಲ ಹಾಕಿ ಮಾತೃದೇವತೆಗಳ ಸ್ತುತಿ ಮಾಡುವ ಇವರ ವೃತ್ತಿಯ ಸ್ಥಿತಿಗತಿಗಳು ಹೇಗಿದೆ ಎಂಬುದನ್ನು ಗಮನಿಸಲಾಗಿದೆ.

ತರಬೇತಿ ಕಾರ್ಯಕ್ರಮಗಳು

ಕರ್ನಾಟಕದ ಬುಡಕಟ್ಟು ಪ್ರಜಾಪ್ರತಿನಿಧಿಗಳಲ್ಲಿ ಅರಿವು ಮೂಡಿಸುವ ಸಲುವಾಗಿ ಬುಡಕಟ್ಟು ಸಂಶೋಧನಾ ಸಂಸ್ಥೆ, ಕರ್ನಾಟಕ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು ಇವರು ಪ್ರಾಯೋಜಿಸಿರುವ ಕರ್ನಾಟಕ ಬುಡಕಟ್ಟು ಪ್ರಜಾಪ್ರತಿನಿಧಿಗಳ ತರಬೇತಿ ಶಿಬಿರಗಳನ್ನು ಈ ಕೆಳಗೆ ಸೂಚಿಸಿರುವ ದಿನಾಂಕಗಳಲ್ಲಿ ಕೈಕೊಳ್ಳಲಾಯಿತು. ಈ ತರಬೇತಿ ಶಿಬಿರದಲ್ಲಿ ನಿರ್ದೇಶಕನಾಗಿ ಕಾರ್ಯನಿರ್ವಹಿಸಲಾಯಿತು.

೧. ಮೊದಲನೆಯ ತರಬೇತಿ ೨೩.೦೨.೨೦೦೬ ರಿಂದ ೨೭.೦೨.೨೦೦೬ರವರೆಗೆ

೨. ಎರಡನೆಯ ತರಬೇತಿ ೦೭.೧೧.೨೦೦೬ ರಿಂದ ೧೧.೧೧.೨೦೦೬ ರವರೆಗೆ

೩. ಮೂರನೆಯ ತರಬೇತಿ ೧೧.೦೭.೨೦೦೮ ರಿಂದ ೧೫.೦೭.೨೦೦೮ ರವರೆಗೆ

**೧೯. ನಿರ್ವಹಿಸಿದ ಇತರೆ ಕೆಲಸಗಳು**

**೧. ಆಡಳಿತಾತ್ಮಕ ಕೆಲಸಗಳು**

ದಿನಾಂಕ ೦೭.೦೨.೨೦೦೯ ರಿಂದ ಬುಡಕಟ್ಟು ಅಧ್ಯಯನ ವಿಭಾಗದ ಮುಖ್ಯಸ್ಥನಾಗಿ ಕಾರ್ಯನಿರ್ವಹಿಸುತ್ತಿದ್ದೇನೆ.



PDF created with pdfFactory trial version www.pdffactory.com